# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:– ಮರಾಠ ಮಂಡಳ ಪಾಲಿಟೆಕ್ನಿಕ್ (ಅನುದಾನಿತ), ಬೆಳಗಾವಿ ಈ ಸಂಸ್ಥೆಗೆ 2020–21ನೇ ಶೈಕ್ಷಣಿಕ ಸಾಲಿಗೆ ಭಾಷಾ ಅಲ್ಪಸಂಖ್ಯಾತ ಸ್ಥಾನಮಾನವನ್ನು ನೀಡುವ ಬಗ್ಗೆ.

*****

ಓದಲಾಗಿದೆ:–
1. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 131 ಟಿಪಿಇ 2014, ದಿನಾಂಕ: 20.08.2014.
2. ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತಾಲಯದ ಕಡತದ ಪ್ರಸ್ತಾವನೆ ಸಂಖ್ಯೆ:DTE-PLAN0DVP2/23/2020 (ಭಾಗ–1).

ಪ್ರ ಸ್ತಾ ವ ನೆ:–

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಅಧಿಸೂಚನೆಯಲ್ಲಿ ರಾಜ್ಯ ಸರ್ಕಾರವು ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಅಲ್ಪಸಂಖ್ಯಾತ ಸ್ಥಾನಮಾನವನ್ನು ನೀಡಲು/ನವೀಕರಿಸಲು ನಿಯಮಗಳನ್ನು/ ಮಾರ್ಗಸೂಚಿಯನ್ನು ರಚಿಸಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಪ್ರಸ್ತಾವನೆಯಲ್ಲಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರು ಮರಾಠ ಮಂಡಲ ಪಾಲಿಟೆಕ್ನಿಕ್ (ಅನುದಾನಿತ), ಬೆಳಗಾವಿ ಈ ಸಂಸ್ಥೆಯು ಸಲ್ಲಿಸಿದ್ದ ಪ್ರಸ್ತಾವನೆಯ ಮೇರೆಗೆ ಸದರಿ ಸಂಸ್ಥೆಗೆ ಹೊಸದಾಗಿ ಭಾಷಾ ಅಲ್ಪಸಂಖ್ಯಾತ ಸ್ಥಾನಮಾನದ ಮಾನ್ಯತೆ ನೀಡುವ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಆಯುಕ್ತಾಲಯದ ಜ್ಞಾಪನ ಸಂಖ್ಯೆ:ಡಿಟಿಇ 19 ಡಿವಿಪಿ(2) 2020, ದಿನಾಂಕ:11.12.2020ರನ್ವಯ ತ್ರಿ–ಸದ್ಯಸರ ತನಿಖಾ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ:23.12.2020ರಂದು ಸಂಸ್ಥೆಗೆ ಭೇಟಿ ನೀಡಿ, ಸ್ಥಳ ತನಿಖೆ ನೆಡೆಸಿ ಪರಿಶೀಲನಾ ವರದಿಯನ್ನು ನೀಡಿದ್ದು, ಅದರಂತೆ, ಮರಾಠ ಮಂಡಳ ಪಾಲಿಟೆಕ್ನಿಕ್ (ಅನುದಾನಿತ), ಬೆಳಗಾವಿ ಈ ಸಂಸ್ಥೆಗೆ ಭಾಷಾ ಅಲ್ಪಸಂಖ್ಯಾತ ಸ್ಥಾನಮಾನವನ್ನು ನೀಡುವ ಬಗ್ಗೆ ಸರ್ಕಾರದ ಆದೇಶವನ್ನು ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಇಡಿ 143 ಟಿಪಿಇ 2020.
## ಬೆಂಗಳೂರು, ದಿನಾಂಕ: 30ನೇ ಆಗಸ್ಟ್ 2021

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮರಾಠ ಮಂಡಳ ಪಾಲಿಟೆಕ್ನಿಕ್ (ಅನುದಾನಿತ), ಬೆಳಗಾವಿ ಈ ಶಿಕ್ಷಣ ಸಂಸ್ಥೆಗೆ 2020–21ನೇ ಶೈಕ್ಷಣಿಕ ಸಾಲಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಭಾಷಾ ಅಲ್ಪಸಂಖ್ಯಾತ ಸ್ಥಾನಮಾನದ ಮಾನ್ಯತೆಯನ್ನು ನೀಡಿ ಆದೇಶಿಸಿದೆ.

1. ರಾಜ್ಯದ ಮರಾಠಿ ಭಾಷಿಕರ ಸಂಖ್ಯೆಯನ್ನು ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ದೃಢೀಕರಿಸಿಕೊಳ್ಳತಕ್ಕದ್ದು.

557 DVP-2

2. ಈ ಪಾಲಿಟೆಕ್ನಿಕ್‌ನ ಆಡಳಿತ ಮಂಡಳಿಯ 2/3 ರಷ್ಟು ಸದಸ್ಯರು ಮತೀಯ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿರಬೇಕು.
3. ಪ್ರತಿ ಕೋರ್ಸಿನ ಶೇ.50ರಷ್ಟು ಸೀಟುಗಳನ್ನು ಆಡಳಿತ ಮಂಡಳಿಯು ನಡೆಸಲ್ಪಡುತ್ತಿರುವ ಸಮುದಾಯದ ವಿದ್ಯಾರ್ಥಿಗಳಿಂದ ತುಂಬಬೇಕಾಗಿದ್ದು, ಅದರಲ್ಲಿ ಶೇ.75ರಷ್ಟು ಸೀಟುಗಳನ್ನು ಕರ್ನಾಟಕ ರಾಜ್ಯದಲ್ಲಿನ ಸದರಿ ಸಂಸ್ಥೆಯು ನಡೆಸಲ್ಪಡುತ್ತಿರುವ ಸಮುದಾಯದ ಅಭ್ಯರ್ಥಿಗಳಿಂದ ತುಂಬತಕ್ಕದ್ದು.
4. 2021-22ನೇ ಶೈಕ್ಷಣಿಕ ಸಾಲಿನಲ್ಲಿ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ಮುಂದುವರೆಸುವ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 23 ಟಿಪಿಇ 2019, ದಿನಾಂಕ:07.02.2020ರಲ್ಲಿ ತಿಳಿಸಿರುವ ಮಾರ್ಗಸೂಚಿಗಳಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

30/08/2021
(ಎಂ.ಜಿ.ವೆಂಕಟೇಶಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಗೆ:-

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2. ತಾಂತ್ರಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು
3. ಕಾರ್ಯದರ್ಶಿಗಳು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು
4. ಕಾರ್ಯದರ್ಶಿಗಳು, ಮರಾಠ ಮಂಡಳ ಪಾಲಿಟೆಕ್ನಿಕ್ (ಅನುದಾನಿತ), ಬೆಳಗಾವಿ.
5. ಪ್ರಾಂಶುಪಾಲರು, ಮರಾಠ ಮಂಡಳ ಪಾಲಿಟೆಕ್ನಿಕ್ (ಅನುದಾನಿತ), ಬೆಳಗಾವಿ (ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
6. ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿ / ಒಬಿಜಿಸಿ

# ಕರ್ನಾಟಕ ಸರ್ಕಾರ

ಸಂಖ್ಯೆ:ಇಡಿ 143 ಟಿಪಿಇ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, 2ನೇ ಗೇಟ್, 6ನೇ ಮಹಡಿ,
ಬೆಂಗಳೂರು, ದಿನಾಂಕ:30/09/2021.

## ತಿದ್ದುಪಡಿ ಆದೇಶ

ಸರ್ಕಾರದ ಆದೇಶ ಸಂಖ್ಯೆ:ಇಡಿ 143 ಟಿಪಿಇ 2020, ದಿನಾಂಕ:30.08.2021ರಲ್ಲಿ ಮರಾಠ ಮಂಡಳ ಪಾಲಿಟೆಕ್ನಿಕ್ (ಅನುದಾನಿತ), ಬೆಳಗಾವಿ ಈ ಸಂಸ್ಥೆಗೆ 2020-21ನೇ ಶೈಕ್ಷಣಿಕ ಸಾಲಿಗೆ ಭಾಷಾ ಅಲ್ಪಸಂಖ್ಯಾತ ಸ್ಥಾನಮಾನವನ್ನು ವಿಸ್ತರಿಸಿ ಆದೇಶ ಹೊರಡಿಸಲಾಗಿರುತ್ತದೆ. ಸದರಿ ಆದೇಶದಲ್ಲಿ ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಆದೇಶಿಸಿದೆ. ಉಳಿದಂತೆ ಯಾವುದೇ ಬದಲಾವಣೆಗಳು ಇರುವುದಿಲ್ಲ.

| ಕ್ರ.ಸಂ. | ಭಾಗ/ಕಂಡಿಕೆ | ಪ್ರಸ್ತುತ ಕಂಡಿಕೆ | ತಿದ್ದುಪಡಿ ಮಾಡಲಾದ ಕಂಡಿಕೆ |
|---|---|---|---|
| 1. | ಷರತ್ತು ಕ್ರ.ಸಂ.2 | ಈ ಪಾಲಿಟೆಕ್ನಿಕ್‌ನ ಆಡಳಿತ ಮಂಡಳಿಯ 2/3 ರಷ್ಟು ಸದಸ್ಯರು ಮತೀಯ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿರಬೇಕು. | ಈ ಪಾಲಿಟೆಕ್ನಿಕ್‌ನ ಆಡಳಿತ ಮಂಡಳಿಯ 2/3 ರಷ್ಟು ಸದಸ್ಯರು ಭಾಷಾ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿರಬೇಕು. |
| 2. | ಷರತ್ತು ಕ್ರ.ಸಂ.4 | 2021-22ನೇ ಶೈಕ್ಷಣಿಕ ಸಾಲಿನಲ್ಲಿ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ಮುಂದುವರೆಸುವ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 23 ಟಿಪಿಇ 2019, ದಿನಾಂಕ: 07.02.2020ರಲ್ಲಿ ತಿಳಿಸಿರುವ ಮಾರ್ಗಸೂಚಿಗಳಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು | 2021-22ನೇ ಶೈಕ್ಷಣಿಕ ಸಾಲಿನಲ್ಲಿ ಭಾಷಾ ಅಲ್ಪಸಂಖ್ಯಾತ ಸ್ಥಾನಮಾನವನ್ನು ಮುಂದುವರೆಸುವ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 131 ಟಿಪಿಇ 2014, ದಿನಾಂಕ:20.08.2014ರಲ್ಲಿ ತಿಳಿಸಿರುವ ಮಾರ್ಗಸೂಚಿಗಳಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು |

DVP-2

3106704/21

763

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

30/09/2021
(ಎಂ.ಜಿ.ವೆಂಕಟೇಶಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಗೆ:-

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.

...2

ಹಿಂಬರಹ ಸಂಖ್ಯೆ: ಸಿಟಿಇ 17 ಡಿವಿಪಿ (2) 2020. ದಿನಾಂಕ: 11-10-2021.

ಸರ್ಕಾರದ ಆದೇಶ **ಸಂಖ್ಯೆ: ಇಡಿ 143 ಟಿಪಿಇ 2020, ಬೆಂಗಳೂರು, ದಿನಾಂಕ:**30.08.2021. ಮತ್ತು **ದಿನಾಂಕ:30.09.2021.** ರ ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಕೆಳಕಂಡವರಿಗೆ ಕಳುಹಿಸಲಾಗಿದೆ.

1. ಅಧ್ಯಕ್ಷರು/ಕಾರ್ಯದರ್ಶಿಗಳು, ಮರಾಠ ಮಂಡಳಿ,(ಅನುದಾನಿತ) ಪಾಲಿಟೆಕ್ನಿಕ್, ಬೆಳಗಾವಿ.
2. ಪ್ರಾಂಶುಪಾಲರು, ಮರಾಠ ಮಂಡಳಿ,(ಅನುದಾನಿತ) ಪಾಲಿಟೆಕ್ನಿಕ್, ಬೆಳಗಾವಿ.
3. ಜಂಟಿ ನಿರ್ದೇಶಕರು [ಆಡಳಿತ/ಪರೀಕ್ಷೆ/ತನಿಖೆ/ಸಿಡಿಸಿ]
4. ಸಹಾಯಕ ನಿರ್ದೇಶಕರು [ಎಂಪಿಸಿ]
5. ಉಪ ನಿರ್ದೇಶಕರು [ಸಾಂಖ್ಯಿಕ ವಿಭಾಗ]
6. ಆಡಳಿತಾಧಿಕಾರಿಗಳಿಗೆ.
7. ಸರ್ಕಾರಿ ಆದೇಶಗಳ ಕಡತಕ್ಕೆ/ ಕಛೇರಿ ಪ್ರತಿಗಳು.
8. E-Governence cell-DTE Website ನಲ್ಲಿ ಪ್ರಚುರ ಪಡಿಸಲು.

ಜಂಟಿ ನಿರ್ದೇಶಕರು(ಆಡಳಿತ)
(ತಾಂತ್ರಿಕ ಶಿಕ್ಷಣ ಇಲಾಖೆ)